ತಟ್ಟಿದ ಸದ್ದು. ರಮಾಕಾಂತ ಒಳಗೆ ಬಂದದ್ದೇ ಕಮಲಾಕ್ಷಿ ಒಂದು ಪಿಸ್ತೂಲನ್ನು ಅವನ ಕೈಯಲ್ಲಿಡುತ್ತ ವಿಚಿತ್ರವಾಗಿ ನಗುತ್ತಾಳೆ.

ಮರಗಳು ಒಂದು ಎಲೆಯೂ ಇಲ್ಲದೆ ಬೋಳು ಬೋಳಾಗಿರುವ ದೃಶ್ಯ. ಧನಂಜಯರು, 'ಸಿನಿಮಾದಲ್ಲಿ ಸಾಕಷ್ಟು ದಿನಗಳುರುಳಿವೆ ಎಂದು ತೋರಿಸುವ ಒಂದು ವಿಧಾನ ಇದು' ಎಂದರು. ಕಮಲಾಕ್ಷಿ ತನ್ನ ಗತಕಾಲದ ಆ ದಾರುಣ ದಿನಗಳನ್ನಷ್ಟೇ ನೆನೆಯುತ್ತಿಲ್ಲ, ಆ ದಿನಗಳನ್ನು ಮತ್ತೆ ಅನುಭವಿಸುತ್ತಿದ್ದಾಳೆ. ಹಾಗೆ ನೋಡಿದರೆ, ಆ ಚಿತ್ರದ ನಿರ್ದೇಶಕ ಅವಳ ಅಭಿನಯವನ್ನಷ್ಟೇ ಚಿತ್ರೀಕರಿಸಿಲ್ಲ, ಜೀವನದ ಅಗ್ನಿಯಲ್ಲಿ ಬಿದ್ದು ಕೊನೆಗೂ ಬದುಕಿಬಂದವಳನ್ನು ಚಿತ್ರೀಕರಿಸಿದ್ದಾನೆ. ಏಳೆಂಟು ವರ್ಷಗಳಾದರೂ ಕಮಲಾಕ್ಷಿ ದೈಹಿಕವಾಗಿ ಅಷ್ಟೇನೂ ಬದಲಾಗಿಲ್ಲ. ಅವಳ ಹಣೆಯಲ್ಲಿ ಕುಂಕುಮವಿಲ್ಲದಿರುವುದನ್ನು ತೋರಿಸುತ್ತದೆ ಒಂದು ಕ್ಲೋಸಪ್ಪು. ನಂತರದ ಶಾಟುಗಳಲ್ಲಿ ಯಾರಾದರೂ ಕಂಡರೆ ಮೊದಲಿನಂತೆಯೇ ಸೆರಗು ಸರಿಪಡಿಸಿಕೊಳ್ಳುತ್ತ, ಮುಗುಳುನಗುತ್ತ ಮಾತಾಡುವ ಅವಳು ಒಂದು ತೋಟದಲ್ಲಿ ಆಳುಕಾಳುಗಳ ಜತೆ ಗಂಡಸಿನ ಹಾಗೆಯೇ ದುಡಿಯುತ್ತಾಳೆ. ಜೊತೆಗೇ ಇದ್ದು ತೋಟದ ಕೆಲಸಗಳಲ್ಲಿ ನೆರವಾಗುತ್ತಿರುವ ಅವಳ ಮಗನಿಗೆ ಮದುವೆಯಾಗಿದೆ. ಅವನ ಹೆಂಡತಿ ಈಗ ತುಂಬು ಗರ್ಭಿಣಿ.

ಆಕಾಶವನ್ನು ಕವಿದ ಮೋಡಗಳು ಇನ್ನೇನು ಮಳೆ ಸುರಿಸುತ್ತೇವೆನ್ನುವಂತೆ ಗುಡುಗುತ್ತಿವೆ. ಬಿಳಿಗೋಡೆಯ ಮೇಲಿನ ಚಿತ್ರಪಟದಲ್ಲಿ ಹರಿಯುತ್ತಿರುವ ಒಂದು ನದಿ. ಅದರ ಎರಡೂ ದಡಗಳಲ್ಲಿ ಎತ್ತರಕ್ಕೆ ಬೆಳೆದ ಮರಗಳು. ವಿಶಾಲವಾದ ಹಾಲಿನಲ್ಲಿ ಟೀಪಾಯಿಯ ನಾಲ್ಕು ಬದಿಗಳಲ್ಲಿ ನಾಲ್ಕು ಕುರ್ಚಿಗಳು. ಕಿಟಕಿಯ ಬಳಿ ಹೊರಗೇನನ್ನೋ ನೋಡುತ್ತ ಕೂತಿರುವೊಬ್ಬ ಮನುಷ್ಯ. ಅರೆತೋಳಿನ ಷರ್ಟು ತೊಟ್ಟುಕೊಂಡ, ಕಚ್ಚೆಪಂಚೆ ಉಟ್ಟುಕೊಂಡ ಆತ ಹಾಗೇ ತುಂಬ ಹೊತ್ತು ಕೂತಿದ್ದಾನೆ ಎಂದು ಅನ್ನಿಸುವ ಹೊತ್ತಿಗೆ ಮೇಲೆದ್ದು ಹಾಲಿನಲ್ಲಿ ಶತಪಥ ತಿರುಗತೊಡಗುತ್ತಾನೆ. ಹಾಗೆ ತಿರುಗುತ್ತಿರುವಾಗ ಒಮ್ಮೊಮ್ಮೆ ಕೈಯಿಂದ ಹಣೆ ಚಚ್ಚಿಕೊಳ್ಳುತ್ತಾನೆ; ತಿರುಗಿದ್ದು ಸಾಕು ಅನ್ನಿಸಿದ್ದೇ ಮತ್ತೆ

